**ದಿನಾಂಕಃ 07-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದಃ**

ಸದರಿ ಮೃತ್ಯು ಪತ್ರ ನನಗೆ 2005 ನೇ ಸಾಲಿನಲ್ಲಿ ದೊರೆತಿರುತ್ತದೆ. ಸದರಿ ಮೃತ್ಯು ಪತ್ರದ ಆಧಾರದ ಮೇಲೆ ನಾವು ಜಮೀನನ್ನು ವಿಭಾಗ ಮಾಡಿಕೊಂಡೆವು. ಸದರಿ ಮೃತ್ಯು ಪತ್ರದ ಪ್ರಕಾರ ವಿಭಾಗದ ಮೇರೆಗೆ ಸದರಿ ವಿಭಾಗದಲ್ಲಿ ಬಂದ ಜಮೀನುಗಳಿಗೆ ಅವರವರ ಹೆಸರು ದಾಖಲಾದವು. ಸದರಿ ಮೃತ್ಯು ಪತ್ರದ ಪ್ರಕಾರ ವಿಭಾಗದ ಆದ ಬಗ್ಗೆ ಮೃತ್ಯು ಪತ್ರವನ್ನು ಹಾಜರು ಪಡಿಸಿರುತ್ತೇನೆ. ನನಗೆ 2005 ನೇ ಸಾಲಿನಲ್ಲಿ ಮೃತ್ಯು ಪತ್ರ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ ಮೃತ್ಯು ಪತ್ರದ ಪ್ರಕಾರ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ಈ ದಾವೆಯಲ್ಲಿ ನನ್ನ ತಂದೆಯನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಅಥವಾ ನಮ್ಮ ಪರವಾಗಿ ಇತರೆ ದಾಖಲೆ ವಗ್ಯೆರೆ ಸಲ್ಲಿಸಿರುವುದನ್ನು ನಾನೇ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿ. ಹಾಗೂ ದಾವಾ ಸ್ವತ್ತಿಗೆ ಸಂಬಂಧಸಿದಂತೆ ತಹಶೀಲ್ದಾರ ಕಚೇರಿಯಿಂದ ಕೆಲವು ದಾಖಲೆಗಳನ್ನು ಪಡೆದು ನಾನೇ ಹಾಜರು ಪಡಿಸಿರುತ್ತೇನೆ ಎಂದರೆ ಸಾಕ್ಷಿ ನನ್ನ ತಂದೆ ಸದರಿ ದಾಖಲೆಗಳನ್ನು ಪಡೆದಿರುತ್ತಾರೆ ಎನ್ನುತ್ತಾರೆ. ಈ ದಾವೆಗೆ ಸಂಬಂಧಿಸಿದಂತೆ ನನ್ನ ತಂದೆ ತಹಶೀಲ್ದಾರ ಕಚೇರಿಗೆ ಹೋಗಿ ದಾಖಲೆಗಳನ್ನು ಪಡೆದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಮೃತ್ಯುಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡುವಂತೆ ನನ್ನ ತಂದೆ ಅರ್ಜಿಯನ್ನು ತಹಶೀಲ್ದಾರ ಕಚೇರಿಗೆ ಸಲ್ಲಿಸಿದ್ದರು. ಸದರಿ ಅರ್ಜಿ ಸಲ್ಲಿಸಿದ ಮೇರೆಗೆ ಮೃತು್ಯ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಆಯಿತು. ಸದರಿ ಮೃತ್ಯು ಪತ್ರದ ಆಧಾರದ ಮೇಲೆ ಯಾವುದೇ ಖಾತೆ ಬದಲಾವಣೆ ಆಗದೆ ಇದ್ದರೂ ಸಹ ಆಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರದ ಮೇಲೆ ಖಾತೆ ಬದಲಾವಣೆ ಮಾಡಲು ಸಲ್ಲಿಸಿದ ಅರ್ಜಿಯನ್ನು ತಹಶೀಲ್ದಾರ ರವರು ತೀರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿ ತೀರಸ್ಕರಿಸಿದ ಆದೇಶವನ್ನು ನನ್ನ ತಂದೆ ತನ್ನ

ಜೀವಿತಾವಧಿಯಲ್ಲಿ ಎಲ್ಲಿಯೂ ಪ್ರಶ್ನಿಸಿ ಸದರಿ ಮೃತ್ಯು ಪತ್ರದ ಆಧಾರದ ಮೇಲೆ ತನ್ನ ಹೆಸರನ್ನುದಾಖಲಿಸುವಂತೆ ಕೇಳಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿ ತಿರಸ್ಕಾರ ಆದನಂತರ ನನ್ನ ತಂದೆ ಗೇಮಪ್ಪನ ಮಗನೆಂದು ಸುಳ್ಳು ಅರ್ಜಿ ನೀಡಿ ತನ್ನ ಹೆಸರನ್ನು ದಾಖಲಿಸಿಕೊಂಡಿದ್ದನು ಎಂದರೆ ಸರಿಯಲ್ಲ. ನನ್ನ ತಂದೆ ದೇಮಪ್ಪರವರ ಜನಕ ತಂದೆ ಪೀರಪ್ಪ. ನನ್ನತಂದೆಯ ಪೂರ್ತಿ ಹೆಸರು ದೇಮಪ್ಪ ಪೀರಪ್ಪ ಲಮಾಣಿ ಎಂದರೆ ಸಾಕ್ಷಿ ದೇಮಪ್ಪ ಗೇಮಪ್ಪ ಲಮಾಣಿ ಎನ್ನುತ್ತಾರೆ. ನನ್ನ ತಂದೆಯ ತಂದೆ ದೇಮಪ್ಪ ಅಲ್ಲ ಪೀರಪ್ಪ ಎಂದರೆ ಸರಿಯಲ್ಲ.

03. ದ್ಯಾಮವ್ವ ಗೋಪಣ್ಣ ಲಮಾಣಿ ಎಂದರೆ ನನ್ನ ದೊಡ್ಡವ್ವ. ಅಂದರೆ ನನ್ನ ದೊಡ್ಡಪ್ಪನ ಹೆಂಡತಿ. ಸದರಿ ದ್ಯಾಮವ್ವ ತೀರಿಕೊಂಡಿರುತ್ತಾರೆ. ಸದರಿ ದ್ಯಾಮವ್ವ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಗ ನನಗೆ 35-40 ವಯಸ್ಸು ಇತ್ತು. ಈಗ ನನಗೆ ವಯಸ್ಸು 60 ವರ್ಷ. ಮರಿಯಪ್ಪ ಮಾಳಗಿ ಎಂಬುವರನ್ನು ನಾನು ನೋಡಿಲ್ಲ. ಹನುಮಂತಪ್ಪ ಈರಪ್ಪ ಲಮಾಣಿ ನನ್ನ ದೂರದ ಸಂಬಂಧಿಕರು. ಸದರಿ ಹನುಮಂತಪ್ಪ ರವರನ್ನು ನಾನು ನೋಡಿಲ್ಲ. ಸದರಿ ಹನುಮಂತಪ್ಪ ಈರಪ್ಪ ಲಮಾಣಿ ನನ್ನ ತಂದೆಯ ಜೊತೆ ಒಡನಾಟ ಹೊಂದಿದ್ದರು ಆದರೆ ನನಗೆ ಮಾಹಿತಿ ಇಲ್ಲ. ನಾನು ಗೇಮಪ್ಪ ರಾಮಪ್ಪ ಲಮಾಣಿ ರವರನ್ನು ನೋಡಿರುತ್ತೇನೆ. ಸದರಿ ಗೇಮಪ್ಪ ರಾಮಪ್ಪ ಲಮಾಣಿ ತನ್ನ ಸಹಿಯಾಗಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು ಎಂದು ತೋರಿಸಲು ಬೇರೆ ಯಾವ ದಾಖಲೆಯನ್ನು ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ಮೃತ್ಯುಪತ್ರವನ್ನು ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ಸದರಿ ಗೇಮಪ್ಪ ರಾಮಪ್ಪ ಲಮಾಣಿ ಸಹಿಯಾಗಿ ತನ್ನ ಹೆಬ್ಬಿಟ್ಟಿನ ಗುರುತನ್ನು ಹಾಕುವುದನ್ನು ನಾನು ನೋಡಿರುತ್ತೇನೆ. ಸದರಿ ಗೇಮಪ್ಪ ರಾಮಪ್ಪ ಲಮಾಣಿ ಪಂಚಾಯತಿಯಲ್ಲಿ ಉತಾರ ಪಡೆಯಲು ಹೋದ ಕಾಲಕ್ಕೆ ತನ್ನ ಹೆಬ್ಬಿಟ್ಟಿನ ಗುರುತನ್ನು ಹಾಕುತ್ತಿದದ್ದನ್ನು ನಾನು ನೋಡಿರುತ್ತೇನೆ. ಸದರಿ ಗೇಮಪ್ಪ ರಾಮಪ್ಪ ಲಮಾಣಿಯವರು ಪಂಚಾಯತಿಯಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ.

04. ಶ್ರೀ.ವಿ.ಚ.ಪಾಟೀಲ ದಸ್ತು ಬರಹಗಾರರನ್ನು ನಾನು ನೋಡಿಲ್ಲ. ಸದರಿ ಮೃತ್ಯುಪತ್ರ 2005 ನೇ ಸಾಲಿನಲ್ಲಿ ಸಿಕ್ಕಿತೆನ್ನಲಾದ ನಂತರ ನಾನು ಸದರಿ ಶ್ರೀ.ವಿ.ಚ.ಪಾಟೀಲ, ಮರಿಯಪ್ಪ ಮಾಳಗಿ ಮತ್ತು ಹನುಮಂತಪ್ಪ ಈರಪ್ಪ ಲಮಾಣಿ ರವರನ್ನು ಬೇಟಿಯಾಗಿಲ್ಲ. ನಾನು ಹಾಜರು ಪಡಿಸಿದ ನಿಡಿ-33 ಮೃತ್ಯುಪತ್ರ ಗೇಮಪ್ಪ ರಾಮಪ್ಪ ಲಮಾಣಿ ಬರೆದುಕೊಟ್ಟ ಮೃತ್ಯು ಪತ್ರ ಅಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರುದ ಮೇಲಿರುವ ಸಹಿ ಸದರಿ ಗೇಮಪ್ಪ ರಾಮಪ್ಪ ಲಮಾಣಿ ಯವರದ್ದು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸದರಿ ಮೃತ್ಯು ಪತ್ರವನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿ ಆಗಿಲ್ಲ ಎಂದರೆ ಸರಿ. ಸದರಿ ಮೃತ್ಯುಪತ್ರ ಸಿಕ್ಕ ನಂತರ ನಾನು ಹನುಮಂತಪ್ಪ ಈರಪ್ಪ ಲಮಾಣಿ ಯವರನ್ನು ಬೇಟಿಯಾಗಿ ವಿಚಾರಣೆ ಮಾಡಿಲ್ಲ ಎಂದರೆ ಸರಿ. ಸದರಿ ಹನುಮಂತಪ್ಪ ಈರಪ್ಪ ಲಮಾಣಿ 2005 ನೇ ಸಾಲಿನಲ್ಲಿ ಜೀವಂತ ಇದ್ದರು ಎಂದರೆನನಗೆ ಗೊತ್ತಿಲ್ಲ. ಸದರಿ ಹನುಮಂತಪ್ಪ ಈರಪ್ಪ ಲಮಾಣಿ ದಿನಾಂಕಃ 06.05.2015 ರಂದು ತೀರಿಕೊಂಡಿರುತ್ತಾರೆ ಎಂದು ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇವೆ ಎಂದರೆ ಸರಿ.

05. ಸದರಿ ಮೃತ್ಯುಪತ್ರುದ ಆಧಾರದ ಮೇಲೆ ನಾವು ದಾವಾ ಸ್ವತ್ತುಗಳಿಗೆ ಮಾಲೀಕರಾಗಿದ್ದೇವೆ ಎಂದು ಯಾವುದೇ ದಾವೆ ದಾಖಲಿಸಿಲ್ಲ ಎಂದರೆ ಸಾಕ್ಷಿ ತಹಶೀಲ್ದಾರ ಕಚೇರಿಗೆ ಅರ್ಜಿ ಸಲ್ಲಿಸಿದ್ದೆವು ಎನ್ನುತ್ತಾರೆ. ಈಗ ಸಾಕ್ಷಿಗೆ ಪ್ರತಿವಾದಿ ನಂ.1 ರಿಂದ 3 ರವರು ದಿನಾಂಕಃ 11.06.2019 ರಂದು ಸಲ್ಲಿಸಿದ ವಕಾಲತ್ ಪತ್ರವನ್ನು ತೋರಿಸಿದ್ದು ಸದರಿ ವಕಾಲತ್ ಮೇಲೆ ಇರುವ ಹೆಬ್ಬೆಟ್ಟಿನ ಸಹಿಯನ್ನು ಸಾಕ್ಷಿ ನೋಡಿ 1 ನೇ ಪ್ರತಿವಾದಿಯದ್ದು ಎಂದು ಹೇಳುತ್ತಾರೆ. ಸದರಿ ವಕಾಲತ್ ಪತ್ರವನ್ನು ನಿಪಿ-69 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.